ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಟಿಟಿಇ 01 ಇಎಪಿ 2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:28/06/2017.

## :ಸುತ್ತೋಲೆ:

ವಿಷಯ: 2015 ರ ಹೊಸ ಪಠ್ಯಕ್ರಮದಲ್ಲಿ ಡಿಪ್ಲೊಮಾ ಪ್ರವೇಶ ಪಡೆದ ವಿದ್ಯಾರ್ಥಿಗಳ ಮೂರು ಮತ್ತು ನಾಲ್ಕನೆ ಸೆಮಿಸ್ಟರ್‌ಗಳಲ್ಲಿ ಅಳವಡಿಸಿರುವ ಕನ್ನಡ ವಿಷಯಗಳ ಪರೀಕ್ಷಾ ಶುಲ್ಕ ಕುರಿತು.

ಉಲ್ಲೇಖ:1) ಸರ್ಕಾರಿ ಆದೇಶ ಸಂಖ್ಯೆ: ಇಡಿ:76:ಟಿಪಿಇ:2016, ದಿ:21/06/2016.
2) ಸರ್ಕಾರಿ ಆದೇಶ ಸಂಖ್ಯೆ: ಇಡಿ:161:ಟಿಪಿಇ:2011, ದಿ:15/07/2011.

*****

ಉಲ್ಲೇಖ(1) ರ ಸರ್ಕಾರಿ ಆದೇಶದಲ್ಲಿ ಆದೇಶಿಸಿರುವಂತೆ 2015 ರ ಹೊಸ ಪಠ್ಯಕ್ರಮದಲ್ಲಿ ಪ್ರವೇಶ ಪಡೆದ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಮೂರು ಮತ್ತು ನಾಲ್ಕನೆ ಸೆಮಿಸ್ಟರ್‌ಗಳಲ್ಲಿ ಅಭ್ಯಾಸ ಮಾಡುವಾಗ ಒಂದು ಕನ್ನಡ ವಿಷಯವನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಬೇಕಾಗುವುದು. ಹತ್ತನೇ ತರಗತಿಯಲ್ಲಿ ಕನ್ನಡವನ್ನು ವಿಷಯವನ್ನಾಗಿ ಅಭ್ಯಾಸ ಮಾಡಿಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಕನ್ನಡ ಬಾರದ ವಿದ್ಯಾರ್ಥಿ ಎಂದು ಪರಿಗಣಿಸಿ ಅಂತಹ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್‌ನಲ್ಲಿ ಕನ್ನಡ ಕಲಿ-1 ಮತ್ತು 4ನೇ ಸೆಮಿಸ್ಟರ್‌ನಲ್ಲಿ ಕನ್ನಡ ಕಲಿ-2 ಪಠ್ಯಕ್ರಮಗಳನ್ನು ಕಡ್ಡಾಯವಾಗಿ ಅಭ್ಯಸಿಸಬೇಕಾಗಿರುತ್ತದೆ. ಹತ್ತನೇ ತರಗತಿಯಲ್ಲಿ ಕನ್ನಡವನ್ನು ವಿಷಯವನ್ನಾಗಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್‌ನಲ್ಲಿ ತಾಂತ್ರಿಕ ಕನ್ನಡ-1 ಮತ್ತು 4ನೇ ಸೆಮಿಸ್ಟರ್‌ನಲ್ಲಿ ತಾಂತ್ರಿಕ ಕನ್ನಡ-2 ಪಠ್ಯಕ್ರಮವನ್ನು ಕಡ್ಡಾಯವಾಗಿ ಅಭ್ಯಸಿಸಬೇಕಾಗಿರುತ್ತದೆ. ಕನ್ನಡ ವಿಷಯಗಳನ್ನು ಕಡ್ಡಾಯವಾಗಿ ಅಭ್ಯಾಸ ಮಾಡಿ ಉತ್ತೀರ್ಣರಾದ ನಂತರ ಡಿಪ್ಲೊಮಾ ಪ್ರಮಾಣ ಪತ್ರ ನೀಡಲಾಗುವುದು. ಈ ಕನ್ನಡ ವಿಷಯಗಳು ಮುಂದಿನ ತರಗತಿಗೆ ಅಂದರೆ ಐದನೆ ಸೆಮಿಸ್ಟರ್ ಪ್ರವೇಶ ಪಡೆಯುವಾಗ 'ಕ್ಯಾರಿ ಓವರ್' ಗೆ ಅನ್ವಯವಾಗುವುದಿಲ್ಲ.

ಐ.ಟಿ.ಐ. ನಲ್ಲಿ ಉತ್ತೀರ್ಣರಾಗಿ ಡಿಪ್ಲೊಮಾ ಲ್ಯಾಟರಲ್ ಎಂಟ್ರಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಬ್ರಿಡ್ಜ್ ವಿಷಯಗಳಿಗೆ ಪ್ರತ್ಯೇಕವಾಗಿ ಪರೀಕ್ಷಾ ಶುಲ್ಕ ಪಾವತಿಸಬೇಕಾಗಿದ್ದು, ಈ ರೀತಿಯ **ಪ್ರತ್ಯೇಕವಾದ ಪರೀಕ್ಷಾ ಶುಲ್ಕ ಕನ್ನಡ ವಿಷಯಗಳಿಗೆ ಇರುವುದಿಲ್ಲ**. ಪರೀಕ್ಷಾ ಶುಲ್ಕ ಪಾವತಿಸುವಾಗ ಎರಡು ವಿಷಯಗಳನ್ನು ಬಾಕಿ ಉಳಿಸಿಕೊಂಡಲ್ಲಿ ರೂ.200/- ಪರೀಕ್ಷಾ ಶುಲ್ಕ ಮತ್ತು ರೂ.50/- ಅಂಕಪಟ್ಟಿ ಶುಲ್ಕ ಹಾಗೂ ಎರಡು ವಿಷಯಗಳಿಗಿಂತ ಹೆಚ್ಚಿನ ವಿಷಯಗಳನ್ನು ಬಾಕಿ ಉಳಿಸಿಕೊಂಡಲ್ಲಿ ರೂ.300/- ಪರೀಕ್ಷಾ ಶುಲ್ಕ ಮತ್ತು ರೂ.50/- ಅಂಕಪಟ್ಟಿ ಶುಲ್ಕ (ಕನ್ನಡ ವಿಷಯಗಳನ್ನೊಳಗೊಂಡ) ಭರಿಸಬೇಕಾಗುತ್ತದೆ.

ಉಲ್ಲೇಖ(2) ಸರ್ಕಾರಿ ಆದೇಶದಲ್ಲಿ ಆದೇಶಿಸಿರುವಂತೆ ಐ.ಟಿ.ಐ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು **ಲ್ಯಾಟರಲ್ ಎಂಟ್ರಿ ಸ್ಕೀಂನಡಿಯಲ್ಲಿ ಪ್ರವೇಶ** ಪಡೆದಾಗ ಮೂರನೆ ಸೆಮಿಸ್ಟರ್‌ನಲ್ಲಿ ಎರಡು ವಿಷಯಗಳನ್ನು ಮತ್ತು ನಾಲ್ಕನೆ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವಾಗ ಒಂದು ವಿಷಯವನ್ನು ಬ್ರಿಡ್ಜ್ ವಿಷಯಗಳಾಗಿ ತೆಗೆದುಕೊಂಡು ಉತ್ತೀರ್ಣರಾಗಬೇಕಾಗುತ್ತದೆ. ಅಂದರೆ 2009 ರ ಪಠ್ಯಕ್ರಮದಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್‌ನಲ್ಲಿ ಅಭ್ಯಸಿಸುವಾಗ Applied Mathematics-I,ಮತ್ತು English Communication,ಹಾಗೂ 4ನೇ ಸೆಮಿಸ್ಟರ್‌ನಲ್ಲಿ ಅಭ್ಯಸಿಸುವಾಗ Applied Mathematics-II ವಿಷಯಗಳನ್ನು ವ್ಯಾಸಂಗ ಮಾಡಬೇಕಾಗಿತ್ತು. ಆದರೆ 2015 ರ ಪಠ್ಯಕ್ರಮದಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್‌ನಲ್ಲಿ ಅಭ್ಯಸಿಸುವಾಗ Engg.Mathematics-I(15SC01M) ಮತ್ತು Communication Skills in English(15CP01E)ಹಾಗೂ 4ನೇ ಸೆಮಿಸ್ಟರ್‌ನಲ್ಲಿ ಅಭ್ಯಸಿಸುವಾಗ Engg.Mathematics-I(15SC02M) ವಿಷಯಗಳನ್ನು ವ್ಯಾಸಂಗ ಮಾಡಬೇಕಾಗುತ್ತದೆ.

eap sv

ಈ ಬ್ರಿಡ್ಜ್ ಕೋರ್ಸ್ ವಿಷಯಗಳಿಗೆ ಪ್ರತ್ಯೇಕವಾಗಿ ಪರೀಕ್ಷಾ ಶುಲ್ಕ ಪಾವತಿಸಬೇಕಾಗುತ್ತದೆ. ಆದರೆ ಈ ಬ್ರಿಡ್ಜ್ ವಿಷಯಗಳಲ್ಲಿ ಅನುತ್ತೀರ್ಣರಾದರೂ ಸಹ ಐದನೆ ಸೆಮಿಸ್ಟರ್‌ಗೆ **ಪ್ರವೇಶ ಪಡೆಯುವಾಗ 'ಕ್ಯಾರಿ ಓವರ್' ಗೆ ಈ ವಿಷಯಗಳನ್ನು ಪರಿಗಣಿಸುವುದಿಲ್ಲ.**

ಕಾರ್ಯದರ್ಶಿ.

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ, ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರ ಗಮನಕ್ಕೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1) ಉಪ ನಿರ್ದೇಶಕರು (ಪರೀಕ್ಷೆ).
2) ಸಹಾಯಕ ನಿರ್ದೇಶಕರು (ಪರೀಕ್ಷೆ).
3) ರಿಜಿಸ್ಟ್ರಾರ್(ಪರೀಕ್ಷೆ).
4) ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು).
5) ಕಾರ್ಯದರ್ಶಿಯವರ ಆಪ್ತ ಶಾಖೆ.
6) ಕಛೇರಿ ಪ್ರತಿ.

eap sv